# ಹರಿಹರನ ರಗಳೆಯಲ್ಲಿ ಶರಣ ಕೆಂಬಾವಿ ಭೋಗಣ್ಣ

**ಸೋಮಶೇಖರ ಎಂ.**

ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಎಸ್. ಜಿ. ಆರ್. ಸಿ. ಎಂ. ಸರ್ಕಾರಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು, ಬಳ್ಳಾರಿ.

**Received: 03-04-2024 ; Acepted: 10-05-2024 ; Published: 08-06-2024**

**DOI: https://doi.org/10.5281/zenodo.11525997**

## ABSTRACT:

ವಚನ ಸಾಹಿತ್ಯದ ಮಾತು ಬಂದ ತಕ್ಷಣವೇ ನಮ್ಮಲ್ಲಿ ಬಸವಾದಿ ಶರಣರ ಆಲೋಚನೆಗಳು ಸುಳಿದಾಡುತ್ತವೆ. ವಚನ ಸಾಹಿತ್ಯದ ಮೇಲೆ ಸಾಕಷ್ಟು ಸಂಶೋಧನೆಗಳು ನಡೆದಿದೆ; ನಡೆಯುತ್ತಲೇ ಇದೆ. ವಚನ ಸಾಹಿತ್ಯವನ್ನು ಅಧ್ಯಯನದ ದೃಷ್ಟಿಯಿಂದ ಬಸವಪೂರ್ವ ಯುಗ (11ನೇ ಶತಮಾನ), ಬಸವ ಯುಗ (12-13ನೇ ಶತಮಾನ), ಬಸವೋತ್ತರ ಯುಗ (15-19ನೇ ಶತಮಾನ) ಹಾಗೂ ಆಧುನಿಕ ಯುಗ (20ನೇ ಶತಮಾನ) ಎಂದೂ ವಿಭಾಗಿಸಿಕೊಳ್ಳಲಾಗಿದೆ. ಈ ಸಾಹಿತ್ಯ ಸೃಷ್ಟಿಯ ಪ್ರಮುಖ ಕಾರಣ ಹಾಗೂ ಪ್ರೇರಣೆಗಳೆಂದರೆ ಶರಣ ಧರ್ಮದ ತತ್ವಗಳ ಪ್ರಸಾರ ಮಾಡುವುದು ಹಾಗೂ ಅಂದಿನ ಸಮಾಜದಲ್ಲಿನ ಅಸಮಾನತೆಯನ್ನು ಹೊಡೆದೋಡಿಸುವುದು. ಹನ್ನೊಂದನೆಯ ಶತಮಾನದಲ್ಲಿ ಈ ಕಾರ್ಯವನ್ನು ಕೈಗೊಂಡವರು ಕೊಂಡಗುಳಿ ಕೇಶಿರಾಜ, ಕೆಂಬಾವಿ ಭೋಗಣ್ಣ, ಶಂಕರದಾಸಿಮಯ್ಯ, ಡೋಹರ ಕಕ್ಕಯ್ಯ, ಮಾದಾರ ಚೆನ್ನಯ್ಯ, ಸಕಳೇಶ ಮಾದರಸ, ಜೇಡರದಾಸಿಮಯ್ಯ ಹಾಗೂ ಚಂದಿಮರಸ. ಇವರೆಲ್ಲ ಬಸವಣ್ಣನವರಿಗಿಂತ ವಯಸ್ಸಿನಲ್ಲಿ ಹಿರಿಯರು. ಕೆಂಬಾವಿ ಭೋಗಣ್ಣನ್ನು ಹೊರತು ಪಡಿಸಿ ಮಿಕ್ಕೆಲ್ಲರೂ ವಚನಗಳನ್ನು ರಚಿಸಿದ್ದಾರೆಂದು ಹಲವು ಸಂಶೋಧನೆಗಳಿಂದ ತಿಳಿದುಬರುತ್ತದೆ.

ಭೋಗಣ್ಣನು ವಚನಕಾರನೋ? ಅಲ್ಲವೋ? ಎಂಬುದಕ್ಕೆ 'ಕೆಂಬಾವಿ ಭೋಗಣ್ಣ ಒಬ್ಬ ಐತಿಹಾಸಿಕ ವ್ಯಕ್ತಿಯಾಗಿದ್ದಾನೆ' ಎಂದು ಎಂ. ಚಿದಾನಂದ ಮೂರ್ತಿ ಅವರು 'ವಚನ ಸಾಹಿತ್ಯ'ಕೃತಿಯಲ್ಲಿ ಸ್ಪಷ್ಟಪಡಿಸಿದ್ದಾರೆ. ಹಲವು ವಿದ್ವಾಂಸರು ಹರಿಹರನ ರಗಳೆಗಳ ಆಧಾರದ ಮೇಲೆಯೇ ಭೋಗಣ್ಣನ ಕಾಯಕ, ವ್ಯಕ್ತಿತ್ವವನ್ನು ದಾಖಲಿಸಿದ್ದಾರೆ. ಏನೇ ಚರ್ಚೆಗಳಿದ್ದರೂ ಭೋಗಣ್ಣನ ಕುರಿತಾದ ವೈಯಕ್ತಿಕ ಮಾಹಿತಿಗಿಂತಲೂ; ಆತನೊಬ್ಬ ಶಿವಶರಣನಾಗಿ ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಸಿಕೊಂಡು ಪ್ರಭುತ್ವ ವ್ಯವಸ್ಥೆಯ ಅಸಮಾನತೆಗಳಿಗೆ ಧ್ವನಿಯೆತ್ತುವ ಮುಖೇನ ಕೆಂಭಾವಿ ಪುರದ ಜನರ ಆರಾಧ್ಯ ದೈವವಾಗಿದ್ದನೆಂಬುದು ಸತ್ಯ. ಈ ವಿಚಾರವನ್ನು ಹರಿಹರ ತನ್ನ ರಗಳೆಯಲ್ಲಿ ಸೊಗಸಾಗಿ

ಚಿತ್ರಿಸಿದ್ದನ್ನು ಕಾಣಬಹುದು.

**KEYWORDS:**
ಕೆಂಭಾವಿ ಭೋಗಣ್ಣ, ಶಿವಶರಣ, ಶಿವಭಕ್ತ, ಜಂಗಮ ಸ್ವರೂಪಿ, ಸಾಮಾಜಿಕ ಕಳಕಳಿ, ಪವಾಡ ಪುರುಷ, ವಚನ ಚಳುವಳಿ.

## ಕೆಂಬಾವಿ ಭೋಗಣ್ಣ ವಚನಕಾರನೋ? ಅಲ್ಲವೋ?

ಕೆಂಬಾವಿ ಭೋಗಣ್ಣ ಬಸವಪೂರ್ವ ಯುಗದ ವೀರಮಾಹೇಶ್ವರನಿಷ್ಠೆ ಮತ್ತು ಜಂಗಮನಿಷ್ಠೆಯುಳ್ಳ ಶರಣ. ಈ ಯುಗದಲ್ಲಿ ಏಳು ವಚನಕಾರರು ವಚನಗಳನ್ನು ರಚಿಸಿದ್ದಾರೆಂದು ಕೆಲವು ಕೃತಿಗಳು ದಾಖಲಿಸಿವೆ. 'ನಿಜಗುರು ಭೋಗೇಶ್ವರ' ಎಂಬ ಅಂಕಿತದಲ್ಲಿ ಸುಮಾರು 22 ವಚನಗಳು ಉಪಲಬ್ದವಾಗಿವೆ. ಆದರೆ ಇವುಗಳು ಕೆಂಬಾವಿ ಭೋಗಣ್ಣನವಲ್ಲವೆಂದು, ಅವು ಬೇರೋಬ್ಬ ಭೋಗಣ್ಣ ಎಂಬ ಹೆಸರಿನ ವಚನಕಾರನದ್ದಾಗಿರಬಹುದೆಂದು ದೃಢಪಡಿಸಿವೆ. ಈ ಅಂಕಿತದ ಮೇಲೆ ದೊರೆತಿರುವ ವಚನಕಾರನ ಬಗೆಗೆ ಇಲ್ಲಿ ಚರ್ಚೆ ಅನಗತ್ಯ. ಆದರೆ ಕಾಲಮಾನಗಳ ಆಧಾರದ ಮೇಲೆ ಆ ವಚನಗಳಲ್ಲಿ ಬಳಕೆಯಾಗಿರುವ ಬೆಡಗಿನ ಪರಿಭಾಷೆಗಳ ಕಾವ್ಯಮಯ ವಿಷಯ ವಿವರಣೆ, ಉಪಮೆ, ಸಾದೃಶ್ಯಗಳ ಮೂಲಕ ಗುರುತಿಸಿಕೊಂಡಿರುವ ವಚನಕಾರನ ಪ್ರತಿಭೆ ಅಡಗಿದೆ ಎಂಬ ಅಂಶ ಮುಖ್ಯವಾಗಿಟ್ಟುಕೊಂಡು ಇವುಗಳ ಆಧಾರದ ಮೇಲೆ ಕೆಂಬಾವಿ ಭೋಗಣ್ಣ ವಚನಕಾರ ಅಲ್ಲ, ಇವನೊಬ್ಬ ಶಿವಭಕ್ತನೆಂದು ಕೆಂಬಾವಿಯಲ್ಲಿ ದೊರೆತಿರುವ ಶಾಸನಗಳು ದಾಖಲಿಸಿವೆ ಎಂಬುದು ಸಂಶೋಧಕರ ಅಭಿಮತ. ಈತನು ವಚನಕಾರನೋ ಅಲ್ಲವೋ ಎಂಬುದಕ್ಕೆ ಸಾಕಷ್ಟು ಚರ್ಚೆಗಳು ನಡೆದಿವೆ. ಕೆಂಬಾವಿ ಭೋಗಣ್ಣನ ಕುರಿತು ಸಂಶೋಧನೆಗೈದ ಭಾಗಶಃ ವಿದ್ವಾಂಸರ ಅಭಿಪ್ರಾಯವೂ 'ಕೆಂಬಾವಿ ಭೋಗಣ್ಣ ವಚನಕಾರ ಅಲ್ಲ' ಎಂಬುದಕ್ಕೆ ಪುಷ್ಟಿನೀಡುತ್ತವೆ. ಆದ್ದರಿಂದ ಹಲವು ವಿದ್ವಾಂಸರು ಹರಿಹರನ ರಗಳೆಗಳು ಮತ್ತು ವಚನಗಳ ಆಧಾರದ ಮೇಲೆಯೇ ಭೋಗಣ್ಣನ ಕಾಯಕ, ವ್ಯಕ್ತಿತ್ವ ಮತ್ತು ಪವಾಡಗಳನ್ನು ಸಹೃದಯರಿಗೆ ಉಣಬಡಿಸಿದ್ದಾರೆ.

ಜೇಡರ ದಾಸಿಮಯ್ಯ, ಬಸವಣ್ಣ ಇವರು ತಮ್ಮ ವಚನಗಳಲ್ಲಿ ಕೆಂಬಾವಿ ಭೋಗಣ್ಣನನ್ನು ಸ್ಮರಿಸಿದ್ದಾರೆ. "ನಂಬಿದ ಚೆನ್ನನ

ಅಂಬಲಿಯನುಂಡ, ಕೆಂಬಾವಿಯ ಭೋಗಯ್ಯನ ಹಿಂದಾಡಿಹೋದ…" (ಸಂಕೀರ್ಣ ವಚನ ಸಂಪುಟ-2, ವಚನ: 810, ಪುಟ: 252) ಎಂದು ಕೆಂಬಾವಿ ಭೋಗಣ್ಣನ ಹಿಂದೆ ಹೋದ ಶಿವಲಿಂಗಗಳ ಪವಾಡವನ್ನು ಜೇಡರದಾಸಿಮಯ್ಯ ತನ್ನ ವಚನವೊಂದರಲ್ಲಿ ಪ್ರಸ್ತಾಪಿಸಿದ್ದಾನೆ. ಬಸವಣ್ಣನವರು ತಮ್ಮ ವಚನವೊಂದರಲ್ಲಿ "ಹುಟ್ಟಿದ ಮಕ್ಕಳೆಲ್ಲ ಅರ್ಥಪ್ರಾಣಾಭಿಮಾನಕ್ಕೆ ಒಡೆಯರಾದ ಪರಿನೋಡ, ಅಟ್ಟಡಗಿಯ ವಿಷವನು ನಿಮಗೆ ಕೊಟ್ಟಲ್ಲದೆ ಉಣ್ಣೆನೆಂಬ ಭಾಷೆ; ಕೊಟ್ಟ ಕೂಡಲ ಸಂಗಮದೇವಯ್ಯ ನಿಮಗೆಂದಟ್ಟಡಗಿಯ; ನೀಡ ಕಲಿಸಿದಾತ ಕೆಂಭಾವಿ ಭೋಗಯ್ಯ" (ಬಸವಣ್ಣನವರ ವಚನ ಸಂಪುಟ, ವಚನ:733, ಪುಟ:184) ಎಂದು ಕೆಂಬಾವಿ ಭೋಗಣ್ಣ ಪ್ರಸಾದಕ್ಕೆ ಹೆಚ್ಚು ಮಹತ್ವ ಕೊಟ್ಟಿದ್ದನ್ನು, ಹಸಿದು ಬಂದ ಜಂಗಮರಿಗೆ ಪ್ರಸಾದವ ಮಾಡಿ ಉಣ ಬಡಿಸುವ ರೀತಿಯನ್ನು ಕಲಿಸಿದವನು ಕೆಂಭಾವಿ ಭೋಗಣ್ಣನೆಂದು ಸ್ಮರಿಸಿಕೊಂಡಿದ್ದಾರೆ. ಇವರ ಮತ್ತೊಂದು ವಚನದಲ್ಲಿ "ನೆರೆನಂಬೋ ನೆರೆನಂಬೋ ಗುರುಲಿಂಗ ಜಂಗಮವ; ದರಮರವಿಲ್ಲದೆ ಸಾಮವೇದಿಗಳಂತೆ; ನೆರೆನಂಬೋ ನೆರೆನಂಬೋ ಕೆಂಬಾವಿ ಭೋಗಣ್ಣನಂತೆ" (ಬಸವಣ್ಣನವರ ವಚನಸಂಪುಟ, ವಚನ:194) ಎಂದು ದೇವರನ್ನು ನಂಬಿದರೆ ಕೆಂಭಾವಿ ಭೋಗಣ್ಣನಂತೆ ನಂಬಬೇಕೆಂದು ಉಲ್ಲೇಖಿಸುತ್ತಾನೆ. ಈ ಆಧಾರದ ಹಿನ್ನೆಲೆಯಲ್ಲಿ ಕೆಂಬಾವಿ ಭೋಗಣ್ಣ ಜೇಡರದಾಸಿಮಯ್ಯನಿಗೆ ಹಿರಿಯನು ಹಾಗೂ ಬಸವಪೂರ್ವಯುಗದವನು ಎಂದು ಹೇಳಬಹುದು.

ಬಸವಪೂರ್ವ ಯುಗದ ವಚನಕಾರರ 'ಸೂಳ್ನುಡಿ'ಗಳು ಬಸವ ಯುಗದ ವಚನಕಾರರಿಗೆ ಪ್ರೇರಣೆಯನ್ನು ಒದಗಿಸಿತು. ಈ ಸೂಳ್ನುಡಿಗಳು 'ಲೋಕದ ಅನುಭವ, ಆಧ್ಯಾತ್ಮಿಕ ಅನುಭಾವ, ಸೂತಕವಿಲ್ಲದ ನುಡಿಗಳ ಸಂಯೋಗವಾಗಿದೆ'. ಕೆಂಭಾವಿ ಭೋಗಣ್ಣನ ಕುರಿತು ಸಮಗ್ರವಾಗಿ ಸಂಶೋಧನೆ ಕೈಗೊಂಡು ಹಲವು ಸಾಹಿತ್ಯಿಕ ಹಾಗೂ ಚಾರಿತ್ರಿಕ ಅಂಶಗಳನ್ನು ಪರಿಶೀಲಿಸಿ ಡಾ. ಕಾಶೀಬಾಯಿ ಎಸ್. ಭೋಗಶೆಟ್ಟಿಯವರು "ಕೆಂಭಾವಿ ಭೋಗಣ್ಣನು ಒಬ್ಬ ವಚನಕಾರ" (ಕೆಂಬಾವಿ ಭೋಗಣ್ಣ , ಪುಟ:74) ಎಂದು ಸ್ಪಷ್ಟಪಡಿಸಿದ್ದಾರೆ. ಆದರೆ ಈತನ ವಚನಗಳ ಉಪಲಬ್ಧತೆಯ ಬಗೆಗೆ ಇನ್ನೂ ಹೆಚ್ಚಿನ ಸಂಶೋಧನೆ ನಡೆಯಬೇಕಾಗಿದೆ. ಹರಿಹರ ಕವಿಯು ರಚಿಸಿದ ಶರಣ ಕೆಂಬಾವಿ ಭೋಗಣ್ಣನ ರಗಳೆ ಮತ್ತು ಜನಪದರಲ್ಲಿ ಪ್ರಚಲಿತವಿದ್ದ ಹಾಡು, ಲಾವಣಿ ಹಾಗೂ ಕಥೆಗಳ ಆಧಾರದಲ್ಲಿ ನಡೆದಿರುವ ಹಲವು

ಸಂಶೋಧನೆಗಳು ಕೆಂಬಾವಿ ಭೋಗಣ್ಣನ ವೈಯಕ್ತಿಕ ಜೀವನದ ಭಾಗಶಃ ಮಾಹಿತಿಗಳನ್ನು ಒದಗಿಸಿವೆ.

ಹರಿಹರ ರಚಿಸಿದ ರಗಳೆಗಳಲ್ಲಿ 'ಕೆಂಬಾವಿ ಭೋಗಣ್ಣನ ರಗಳೆ' ಪ್ರಮುಖವಾಗಿ ಕಾಣಿಸಿಕೊಂಡಿದೆ. ಈ ರಗಳೆಯು ಹನ್ನೆರಡನೆಯ ಶತಮಾನಕ್ಕಿಂತಲೂ ಪೂರ್ವದ ಸಮಕಾಲೀನ ಸಮಾಜದ ಸಾಮಾಜಿಕ ಸ್ಥಿತ್ಯಂತರಗಳ ಸ್ಪಷ್ಟವಾದ ಚಿತ್ರಣ ಕಟ್ಟಿಕೊಟ್ಟಿದೆ. ಹಾಗಾಗಿ ಈ ರಗಳೆಯು ಹಲವು ನೆಲೆಗಳಲ್ಲಿ ಅಧ್ಯಯನ ಯೋಗ್ಯವಾಗಿದೆ. ಪ್ರಭುತ್ವದ ಕಾಲಘಟ್ಟದಲ್ಲಿ ಬಾಳಿ ಬದುಕಿದ್ದ ಶರಣ ಭೋಗಣ್ಣನು ಪ್ರಭುತ್ವಕ್ಕೆ ಹೇಗೆ ಸವಾಲಾಗಿದ್ದನೆಂಬ ಅಂಶಗಳು ಒಂದೆಡೆಯಾದರೆ; ಭಕ್ತಿಯ ತವನಿಧಿಯಾಗಿ, ಪವಾಡ ಪುರುಷನಾಗಿ ಕೆಂಬಾವಿ ಪುರದಲ್ಲಿ ಹೇಗೆ ಕೀರ್ತಿವಂತನಾಗಿದ್ದನೆಂಬುದು ಮತ್ತೊಂದು ಅಂಶ. ಸಮಾಜದಲ್ಲಿ ಎಲ್ಲರೂ ಸಮಾನತೆಯಿಂದ ಬದುಕಬೇಕು ಎಂಬ ಧೋರಣೆ ಈತನದ್ದು. ದೀನ ದಲಿತರನ್ನು ಉದ್ಧಾರ ಮಾಡುವ, ಜಾತಿ ಮತಭೇದವಿಲ್ಲದ ಸಮಸಮಾಜವನ್ನು ಕಣ್ತುಂಬಿಕೊಳ್ಳುವ ದೂರದೃಷ್ಟಿ ಹೊಂದಿದ್ದ ಶಿವಭಕ್ತ ಕೆಂಬಾವಿ ಭೋಗಣ್ಣ. ಈತನ ಕುರಿತು ಹರಿಹರ ತನ್ನ ರಗಳೆಯಲ್ಲಿ ಸೊಗಸಾಗಿ ವರ್ಣಿಸಿದ್ದಾನೆ.

**ಹರಿಹರನ ರಗಳೆಯಲ್ಲಿ ಕೆಂಬಾವಿ ಭೋಗಣ್ಣ:**

ವಸುಧೆಯ ಮೇಲೆ ಶಿವಭಕ್ತಿಯ ಆಗರವಾಗಿದ್ದ ಕೆಂಬಾವಿಯೆಂಬ ಪುರವಿತ್ತು. ಅದು ಶಿವಪುರವೆಂದೇ ಖ್ಯಾತಿ ಪಡೆದುಕೊಂಡಿತ್ತು. ಅಲ್ಲಿ ಭಕ್ತಿಯ ತವನಿಧಿಯಾದ, ಜಂಗಮ ಪ್ರೇಮಿಯಾದ ಭೋಗಣ್ಣನೆಂಬ ಶಿವಭಕ್ತನಿದ್ದನು. ಈತನು ಉತ್ತಮೋತ್ತಮ ಗುಣಧಾರಿಯಾಗಿದ್ದನು. ಅಲ್ಲದೆ ನಿರ್ದೋಷಿ, ನಿಷ್ಕಾಮಿಯಾಗಿ ಒಳ್ಳೆಯ ಹೆಸರನ್ನು ಪಡೆದಿದ್ದನು. ಹೀಗೆ ಭೋಗಣ್ಣ ಉತ್ತಮ ಗುಣ ಸಂಪನ್ನತೆಯಿಂದ ನಡೆದುಕೊಂಡಿದ್ದ, ಶಿವಭಕ್ತರೆಂದರೆ ಸಾಕು ಯಾವುದೇ ಭೇದವನ್ನು ಕಲ್ಪಿಸದೆ ಸಾಕ್ಷಾತ್ ಹರನೇ ತನ್ನ ಮನೆಗೆ ಆಗಮಿಸಿದ್ದಾನೆಂದು ಭಾವಿಸಿ ಜಂಗಮ ಸೇವೆಯನ್ನು ಕೈಗೊಳ್ಳುತ್ತಿದ್ದ.

ಭೋಗಣ್ಣನು ಹಲವು ವರುಷಗಳವರೆಗೆ ಸತತವಾಗಿ ಶಿವನಾಮಸ್ಮರಣೆಯಲ್ಲಿ ಕಾಲ ಕಳೆಯುತ್ತಿರಲು, ಸುಖದಿಂದ ಇರುವಾಗ, ಒಂದು ದಿನ ಅವನ ಸತ್ವವನ್ನು ಪರೀಕ್ಷಿಸಲೆಂದು ಒಮ್ಮೆ ಶಿವನು ಮನೆಗೆ ಬರುತ್ತಾನೆ.

**“ಇಂದುಧರನೊಂದು ವೇಷಂಬೊತ್ತು ಬರುತಿರಲು**
**ಹೆಗಲ ಮಿಳಿ ಕೈಯ ಕಂಕರಿಗೋಲಿನೀಶ್ವರಂ**
**ಸೊಗಯಿಪ ವಿಭೂತಿ ರುದ್ರಾಕ್ಷಿಯ ಕೃಪಾಕರಂ**
**ಹಿರಿಯ ವೇಷಂಗೊಂಡು ಮುಂದಂ ಸುಳಿಯೆ**
**ಶರಣನ ಮನಂ ನೋಡಲೆಂದು ಮುದದಿಂ ಸುಳಿಯೆ**
**ಬಂದು ಭೋಗಣ್ಣನೊಲವಿನಿಂದೆ ನೆರೆ ಸೈಗೆಡೆದು**
**ಮಂದೈಸಿ ಪುಳಕಂಗಳೊಪ್ಪೆ ಪದಮಂ ಪಿಡಿದು”**
**(ಹರಿಹರನ ರಗಳೆಗಳು, ಪುಟ:273)**

ಹೀಗೆ ಮನೆಯ ಮುಂದೆ ಸುಳಿದಾಡಿದ ಆ ವ್ಯಕ್ತಿಯ ಹೆಗಲ ಮೇಲಿದ್ದ ಮಿಣಿ ಹಾಗೂ ಕೈಯಲ್ಲಿದ್ದ ಸಂಬೋಳಿಗೋಲುಗಳನ್ನು ನೋಡಿದ ಕೂಡಲೇ ಇವನೊಬ್ಬ ಅಸ್ಪೃಶ್ಯನೆಂದು ತಂತಾನೇ ಅರಿವಾಗುತ್ತದೆ. ಭೋಗಣ್ಣನ ದೃಷ್ಠಿಗೆ ಗೋಚರವಾದುದು ಅವನು ಅಸ್ಪೃಶ್ಯನೆಂದಲ್ಲ. ಬದಲಾಗಿ ಅವನ ನೊಸಲ ಮೇಲೆ ಮೂಡಿದ್ದ ವಿಭೂತಿ ಹಾಗೂ ಕೊರಳ ರುದ್ರಾಕ್ಷಿಗಳು ಅವನೊಬ್ಬ ಶಿವಭಕ್ತನೆಂದು ಸುಳಿವು ನೀಡಿದವು. ಶಿವಭಕ್ತನೊಬ್ಬನಿಗೆ ಶಿವಭಕ್ತನನ್ನು ಗುರುತಿಸಲು ಯಾರ ಸಹಾಯವೂ ಬೇಕಾಗಿರುವುದಿಲ್ಲ. ಈ ಸತ್ಯದ ಅರಿವು ಭೋಗಣ್ಣನಿಗಾಯಿತು. ಶಿವಭಕ್ತನೆಂದು ತಿಳಿದ ಕೂಡಲೇ ಭೋಗಣ್ಣ ದಾಸೋಹಕ್ಕೆಂದು ಅವನನ್ನು ತನ್ನ ಮನೆಗೆ ಕರೆದುಕೊಂಡು ಹೋಗುತ್ತಾನೆ. ಶಿವಭಕ್ತನೊಬ್ಬ ಈ ಕಾರ್ಯ ಮಾಡುವುದು ಸಹಜಧರ್ಮ. “ಕೆಲಬಲದ ಮನೆಯ ವಿಪ್ರರು ನೆರೆದು ನೋಡುತಿರೆ” (ಹರಿಹರನ ರಗಳೆಗಳು, ಪುಟ:273) ಎಂದು ಹರಿಹರ ರಗಳೆಯಲ್ಲಿ ಪ್ರಸ್ತಾಪಿಸುತ್ತಾನೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ; ಭೋಗಣ್ಣ ಆ ಅಸ್ಪೃಶ್ಯನನ್ನು ಮನೆಯೊಳಗೆ ಕರೆದುಕೊಂಡು ಹೋದದ್ದನ್ನು ತನ್ನ ನೆರೆಹೊರೆಯ ಪುರೋಹಿತರು, ಮೇಲ್ವರ್ಗದ ಜನರು ನೋಡಿದರು. ಈ ಮಾತಿನಲ್ಲಿಯೇ ಭೋಗಣ್ಣನ 'ಶರಣ' ಬದುಕಿನ ಮೂಲ ಸಂಘರ್ಷವಿರುವುದು ವೇದ್ಯವಾಗುತ್ತದೆ. ಅಂದರೆ ಕುಲ ಜಾತಿಯ ಲೆಕ್ಕಾಚಾರದಲ್ಲಿ ಮುಳುಗಿದ್ದವರಿಗೆ ಇದು ಬೇರೆ ರೀತಿಯಲ್ಲಿ ಗೋಚರವಾದದ್ದು ಮತಾಂಧತೆಯನ್ನು ಪ್ರತಿನಿಧಿಸುತ್ತದೆ.

ಭೋಗಣ್ಣ ಮನೆಯೊಳಗೆ ಕರೆದೊಯ್ದಿದ್ದ ವೇಷಧಾರಿ ಶಿವನನ್ನು ಒಬ್ಬ ಜಂಗಮನೆಂದು ಬಗೆದು ಶಿವನಿಗೆ ಅರ್ಪಿತವಾಗುವ ಎಲ್ಲ ಬಗೆಯ ಭಯ ಭಕ್ತಿಯಿಂದ ನಡೆದುಕೊಂಡು, ಕೂಡಲು ಉನ್ನತ ಆಸನವನ್ನು ನೀಡಿದನು. ನಂತರ ಆನಂದದಿಂದ ಪಾದದ್ವಯಗಳನ್ನು ತೊಳೆದು ನಮಸ್ಕರಿಸಿ, ಅದನ್ನು ಹೃದಯ ತುಂಬಿಕೊಂಡನು. ದೇವಾರ್ಚನೆಯ ಮಾಡಿ “ಆರೋಗಣೆಗೆ

ಕೊಟ್ಟು ಭಾವಿಸುತ್ತೆರಗಿ ಭಯಭಕ್ತಿಯಂ ಮುಂದಿಟ್ಟು ಅವರ ಪ್ರಸಾದಮಂ ಸಾದರಂ ಕೈಕೊಂಡು ಶಿವಭಕ್ತಿಯೊಳಗೆ" (ಹರಿಹರನ ರಗಳೆಗಳು, ಪುಟ:274) ಸಂತೋಷದಿಂದ ತಲ್ಲೀನನಾಗಿದ್ದನು.

ಭೋಗಣ್ಣನ ಆಟಗಳನ್ನು ಕಣ್ಣಾರೆ ಕಂಡಿದ್ದ ನೆರೆಹೊರೆಯ ಪುರೋಹಿತರು, ಮೇಲ್ವರ್ಗದ ಜನರು ಕುಪಿತಗೊಂಡು ರಾಜ ಚಂದಿಮರಸನಲ್ಲಿಗೆ ದೂರನ್ನು ನೀಡಲು ಹೋದರು.

**"ನಿಮ್ಮೂರ ಭೋಗಣ್ಣನೆಂಬ ಭಕ್ತಂ ಮೀರಿ**
**ತಮ್ಮ ಭಕ್ತಾಚಾರವೆಗ್ಗಳಂ ತಲೆಗೇರಿ**
**ಹೊಲೆಗಲಸಿ ನೆಲೆಗೆಟ್ಟು ಛಲವುಡುಗಿ ಕುಲವಳಿದು**
**ಹೊಲೆಯನೆನ್ನದೆ ಹಿರಿಯ ಭಕ್ತನೆಂದರಿದರಿದು**
**ತಂದಿಂತು ಮನೆಯೊಳಗೆ ಗೋಜಾಗತಂ ಮಾಡಿ**
**ಸಂದ ವಿಪ್ರರ ಕರ್ಮವೆಲ್ಲಮಂ ಪುಸಿಮಾಡಿ**
**ಹೊಲೆಯನಂ ಮುಂದಿಟ್ಟುಕೊಂಡೈದನೆಲೆಯರಸ**
**ಕುಲವೆಲ್ಲ ನಿರ್ಮೂಲವಾದುದಿಂದೆಲೆಯರಸ"**
**(ಹರಿಹರನ ರಗಳೆಗಳು, ಪುಟ:274)**

ಎಂದು 'ಕಡುಮೂರ್ಖರೆಲ್ಲರುಂ' ದೊರೆಗೆ ದೂರನ್ನು ಸಲ್ಲಿಸುತ್ತಾರೆ. ಆತನನ್ನು ಕರೆದು ವಿಚಾರಿಸಬೇಕು ಅಲ್ಲದೇ ಊರಿನಿಂದ ಬಹಿಷ್ಕಾರ ಹಾಕಬೇಕೆಂದು ಮೊರೆಯಿಟ್ಟರು. ಭೋಗಣ್ಣನನ್ನು ಕರೆದು ತಿಳಿ ಹೇಳಿ ಪುರದಿಂದ ಹೊರಗಟ್ಟಬೇಕು ಇಲ್ಲದಿದ್ದರೆ ನಾವೆಲ್ಲ ಪುರ ತೊರೆಯುವುದಾಗಿ ರಾಜನಿಗೆ ಹೆದರಿಸಲು; ಇದರಿಂದ ಸಹಜವಾಗಿಯೇ ಅರಸ ಕ್ರೋಧಗೊಳ್ಳುತ್ತಾನೆ. ಜಡವಾದಿಗಳ ಮಾತಿಗೆ ರಾಜ ಚಂದಿಮರಸನು ಭೋಗಣ್ಣನ್ನು ಕರೆತರಲು ಅನುಚರರನ್ನು ಕಳುಹಿಸಿದನು.

**"ಏನಯ್ಯ ಪುರದೊಳಗಕೃತ್ಯವಂ ಮಾಳ್ಪರೆ**
**ಏನಾದಡಂ ಹೊಲೆಯರಂ ಹೋಗಿಸಿ ಬಾಳ್ವರೆ**
**ಮನೆಯೊಳಗನಾಮಿಕನ ಪೋಗಿಸುವರೆ ಭೋಗಣ್ಣ**
**ಮನವಾರೆ ನಿಮ್ಮದಾಚಾರವೇ ಭೋಗಣ್ಣ "**
**(ಹರಿಹರನ ರಗಳೆಗಳು, ಪುಟ:274)**

ಎಂದು ರಾಜನಾದ ಚಂದಿಮರಸನು ಭೋಗಣ್ಣ ಎಸಗಿದ್ದ ವರ್ಣಸಂಕರ ಕೃತ್ಯದ ಬಗ್ಗೆ ವಿಚಾರಣೆ ಮಾಡುತ್ತಾನೆ. ಪುರೋಹಿತಶಾಹಿಯ ಅನುಜ್ಞೆಯಂತೆ ಪ್ರಭುತ್ವ ನಡೆಯುತ್ತಿದ್ದ ಕಾಲದಲ್ಲಿ ಅಧಿಕಾರಸ್ಥನಾದ ಪ್ರಭುವು ಅನಿವಾರ್ಯವೆಂಬಂತೆ ತಪ್ಪಿತಸ್ಥನಾದ ಭೋಗಣ್ಣನನ್ನು ವಿಚಾರಿಸಿ ಪೇಚಿಗೆ

ಸಿಲುಕುವುದು ವಿಪರ್ಯಾಸವಾಗಿ ಕಂಡುಬರುತ್ತದೆ. ರಾಜನ ಮುಂದೆ ವಿಚಾರಣೆಗೆ ಒಳಗಾದ ಭೋಗಣ್ಣನು “ಎನೆ ಹೊಲೆಯರಂ ಹೊಗಿಸಲಿಲ್ಲ ಮನೆಯೊಳಗರಸ; ನಿನಗೆ ತಿಳಿವಿಲ್ಲ ತಿಳಿವಿಲ್ಲದೆಡೆ ಕೇಳರಸ” (ಹರಿಹರನ ರಗಳೆಗಳು, ಪುಟ:274) ಎಂದು ಅರಸನಿಗೆ ತಿಳಿಹೇಳುತ್ತ ಅಂದಿನ ಪ್ರಭುತ್ವಕ್ಕೆ ಹರಿತವಾದ ಉತ್ತರ ಕೊಡುವನು.

**“ನಾರಾಣಕ್ರಮಿತರಂ ಪೊಗಿಸಿದನೆ ಮನೆಯೊಳಗೆ**
**ಸೂರಿಭಟ್ಟರನೋಯ್ದು ಪೊಗಿಸಿದನೆ ಮನೆಯೊಳಗೆ**
**ಕೃಷ್ಣಪೆದ್ದಿಗಳನೊಮ್ಮೆಯು ಕರೆದು ಬಲ್ಲೆನೆ**
**ವಿಷ್ಣುಭಟ್ಟರನೊಮ್ಮೆಯುಂ ಸೋಂಕಿ ಬಲ್ಲೆನೆ**
**ಶಿವನನರಿಯದ ಹೊಲೆಯರಂ ಹೋಗಿಸಿ ಕೇಳರಸ**
**ಶಿವಭಕ್ತನಂ ಹೋಗಿಸಿದೆಂ ತಪ್ಪೆ ಹೇಳರಸ”**
**(ಹರಿಹರನ ರಗಳೆಗಳು, ಪುಟ:274)**

ಎಂದು ಮಾರ್ಮಿಕವಾಗಿಯೇ ಉತ್ತರಿಸಿದ. ರಾಜನಾದವನಿಗೆ ಸಮಾಜದ ವರ್ಗವ್ಯವಸ್ಥೆಯ ಅರಿವು ಸ್ಪಷ್ಟವಾಗಿ ತಿಳಿಯುವಂತೆ ಮಾಡಿದ. ಭೋಗಣ್ಣ ಕೊಟ್ಟ ಉತ್ತರದ ಪ್ರತಿಯೊಂದು ಮಾತಿನಲ್ಲಿಯೂ ಅಡಗಿರುವ ಪ್ರಶ್ನಾರ್ಥಕ ಧೋರಣೆಯನ್ನಿಲ್ಲಿ ಗಮನಿಸಬಹುದು. ಈ ಪ್ರಶ್ನೆಗಳು ಎಷ್ಟೇ ಹರಿತವಾಗಿದ್ದರೂ ಪ್ರಭುತ್ವ ವ್ಯವಸ್ಥೆಯ ಮುಂದೆ ನಿರರ್ಥಕವೆನಿಸುತ್ತದೆ. ಕೂಡಲೇ ಅಲ್ಲಿರುವ ಪುರೋಹಿತಶಾಹಿ ವರ್ಗವು ಕುಪಿತಗೊಂಡು;

**“ಛಂದವಾಯಿತು ಮಟ್ಟಿಯಿಟ್ಟರುಂ ಹೊಲೆಯರೆ**
**ಇಂತಪ್ಪ ಸಿತಗರೆಮ್ಮೂರೊಳಗಿರಲ್ವೇಡ**
**ಇಂತಪ್ಪರಂ ಕಂಡಡಂಜುವೆವಿರಲ್ವೇಡ**
**ಹೋಗೆಂದು ಚಂದಿಮರಸಂ ಜರೆದು ನುಡಿವುತಿರೆ”**
**(ಹರಿಹರನ ರಗಳೆಗಳು, ಪುಟ:274)**

ಎಂದು ಚಂದಿಮರಸನು ಸಮಾನತೆಯ ಪರಂಪರೆಯನ್ನು ಸ್ಥಾಪಿಸಲು ಹೊರಟಿದ್ದ ಭೋಗಣ್ಣನಿಗೆ ನುಡಿಯುವನು. ಅದಕ್ಕೆ ಭೋಗಣ್ಣನು ಚಂದಿಮರಸನ ಪ್ರಶ್ನೆಗಳಿಗೆ ಸಹಜವೆನಿಸಿದ ಉತ್ತರಗಳನ್ನೇ ಕೊಡುತ್ತಾನೆ. ಆದರೆ ರಾಜನು ಭೋಗಣ್ಣನ ಉತ್ತರಗಳಿಗೆ ತೃಪ್ತನಾಗಲಿಲ್ಲ. ಕಾರಣ ಅಂದಿನ ಪ್ರಭುತ್ವ ವ್ಯವಸ್ಥೆಯಲ್ಲಿದ್ದ ಶಿಕ್ಷಿತ ವರ್ಗದ ರಾಜಕೀಯ ಒತ್ತಡಗಳಿಗೆ ಅರಸನು ಮಣಿಯಬೇಕಾದ ಅನಿವಾರ್ಯ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಅದ್ದರಿಂದ ವರ್ಣ ಸಂಕರಕ್ಕೆ ಕಾರಣನಾದ ಭೋಗಣ್ಣನಿಗೆ ಬಹಿಷ್ಕಾರದ ಶಿಕ್ಷೆ ವಿಧಿಸಿ ರಾಜ್ಯದಿಂದ ಹೊರಹಾಕುತ್ತಾನೆ. ರಾಜನ ಶಿಕ್ಷೆಯನ್ನು ಸ್ವೀಕರಿಸಿದ ಭೋಗಣ್ಣ

ಕೆಂಬಾವಿ ಪುರವನ್ನು ತೊರೆದು ಹೊರಡುವನು. ಈ ಸಂದರ್ಭವನ್ನು ಹರಿಹರ ಅತ್ಯಂತ ಪವಾಡ ಸದೃಶ್ಯವಾಗಿ ಚಿತ್ರಿಸಿದ್ದಾನೆ.

**"ಒಂದಡಿಯನಿಡೆ ಪುರದ ಲಿಂಗವೊಡನುಬ್ಬಿದವು**
**ಮುಂದಕಡಿಯಿಡೆ ಪುರದ ಲಿಂಗವೊಡನೆಳಸಿದವು**
**ನಡೆಯೆ ನಡೆದವು ಪುರದ ಶಿವಲಿಂಗವೊಂದಾಗಿ**
**ಒಡನೊಡನೆ ಭೋಗಣ್ಣನೆಡಬಲದೊಳೊಂದಾಗಿ"**
**(ಹರಿಹರನ ರಗಳೆಗಳು, ಪುಟ:274)**

ಹೀಗೆ ಕೆಂಬಾವಿಯಲ್ಲಿದ್ದ ಎಲ್ಲಾ ಲಿಂಗಗಳು ಭೋಗಣ್ಣನೊಡನೆಯೇ ಪುರದಿಂದ ಹೊರನಡೆದವು. ಭೋಗಣ್ಣನು ತನ್ನ ಹಿಂದೆ-ಮುಂದೆ, ಎಡ-ಬಲದಲ್ಲಿ, ಎಲ್ಲಿ ನೋಡಿದರಲ್ಲಿ ಲಿಂಗಗಳು ಬರುತ್ತಿರುವುದು ಗಮನಿಸಿದ. ಈ ಲಿಂಗಗಳು ನಡೆಯುತ್ತಿರುವಾಗ ಹೂಪತ್ರೆಗಳು ಮರದಿಂದ ಉದುರಿ ಪೂಜೆಗೈದವು ಎಂದು ಹರಿಹರ ವರ್ಣಿಸುತ್ತಾನೆ. ಅಲ್ಲದೆ;

**"ಇಳೆಯೊಳುರುಳ್ದವು ಲಿಂಗ ಕಾಶಿಗೆಯ್ದುವ ತೆರದಿ**
**ಜಂಗಮವು ಲಿಂಗಕ್ಕೆ ಲಿಂಗವಾ ಜಂಗಮಕೆ**
**ಲಿಂಗ ಜಂಗಮವೆಂಬವವಿಭೇದವೀ ಜಗಕೆ**
**ಎಂಬಂತೆ ಭೋಗಣ್ಣನೊಡನೊಡನೆ ಬರುತಮಿರೆ"**
**(ಹರಿಹರನ ರಗಳೆಗಳು, ಪುಟ:274)**

ಹೀಗೆ ನಡೆದು ಇಡೀ ಊರೊಳಗೆ ಪೂಜೆಗೊಳ್ಳುತ್ತಿದ್ದ ಸರ್ವಲಿಂಗಗಳೂ ಭೋಗಣ್ಣನೊಡನೆ ಹೋಗುತ್ತವೆ. ಶಿವಲಿಂಗಗಳು ಚಳಿ, ಗಾಳಿ, ಬಿಸಿಲನ್ನು ಲೆಕ್ಕಿಸದೇ ಬರುತ್ತಿರುವ ದೃಶ್ಯಗಳು ಹರಿಹರನ ರಗಳೆಯಲ್ಲಿ ಅದ್ಭುತವಾಗಿ ವರ್ಣಿತಗೊಂಡಿದೆ. ಇವುಗಳನ್ನು ನೋಡಿದ ಭೋಗಣ್ಣನು ತುಂಬಾ ಸಂತೋಷದಿಂದ ಲಿಂಗಗಳನ್ನು ಬಿಗಿದಪ್ಪಿಕೊಂಡನು. ಇದೊಂದು ಪವಾಡವೆಂಬುದು ಸತ್ಯವೇ. ಇದು ಭೋಗಣ್ಣನ ಪೂಜ್ಯಾರ್ಹ ವ್ಯಕ್ತಿತ್ವವನ್ನು ಹೇಳುತ್ತದೆ ಎಂಬುದು ಗಮನಾರ್ಹ.

ಕೆಂಬಾವಿಯಲ್ಲಿ ಪುರೋಹಿತರು ಪೂಜೆಗೈಯಲು ಹೋದಾಗ ಅಲ್ಲಿ ಲಿಂಗಗಳು ಗೋಚರಿಸದೆ ಹೋದವು. ಭೋಗಣ್ಣನ ಹಿಂದೆ ಲಿಂಗಗಳು ಹೋಗಿವೆ ಎಂಬುದನ್ನು ಅರಿತು; ಇದರಿಂದ ಭಯಭೀತರಾಗಿ ಪುರೋಹಿತರೆಲ್ಲರೂ ಓಡಿ ಬಂದು; "ದೇವಾಲಯಂಗಳೊಳ್ ಬರಿಯ ಪೀಠಂಗಳವೆ, ಭೂವಳಯದೊಳಗೆ ಇದರಿಂದ ಕೌತುಕಮೊಳವೆ, ಭೋಗಣ್ಣನೊಡನೆ ಹೋದವು ಲಿಂಗಕುಳವೆಲ್ಲ" (ಹರಿಹರನ ರಗಳೆಗಳು,

ಪುಟ:275) ಎಂದು ಚಂದಿಮರಸನಿಗೆ ದೂರನ್ನು ಸಲ್ಲಿಸಿದರು. ಕೆಂಬಾವಿ ಪುರವನ್ನು ತೊರೆದು ಹೋದ ಭೋಗಣ್ಣನನ್ನು ಹಿಂದಕ್ಕೆ ಕರೆತರಲು ಒತ್ತಾಯಿಸಿದರು. ಅಲ್ಲದೆ ಭೋಗಣ್ಣನ ಆದಮ್ಯವಾದ ಭಕ್ತಿಯಿಂದಾಗಿ ಲಿಂಗಗಳು ಪುರವನ್ನು ತೊರೆದಿವೆ ಎಂಬ ಕಟುವಾಸ್ತವನ್ನು ಪುರೋಹಿತ ವರ್ಗದ ಜನರು ಅರಸನಿಗೆ ಅರುಹಿದರು. ಆದ್ದರಿಂದ ಸಕಲ ಲಿಂಗದ ನಡುವೆ ಬಾಳುವ ಭೋಗಣ್ಣನನ್ನು ಹೇಗಾದರೂ ಮಾಡಿ ಕೆಂಬಾವಿ ಪುರಕ್ಕೆ ಕರೆತರಬೇಕೆಂದು ಮೊರೆಯಿಟ್ಟರು.

ಚಂದಿಮರಸನು ಪುರೋಹಿತ ವರ್ಗದ ಜನರ ಮಾತಿನಿಂದ ಮಂದಮತಿಯಾದೆನೆನುತ ಚಿಂತಾಕ್ರಾಂತನಾದನು. ಶಿವ ಲಿಂಗಗಳು, ಹಬ್ಬಗಳು, ಶಿವದೇವಾಲಯಗಳು ಮುಂತಾದುವೆಲ್ಲ ಒಂದು ಬಗೆಯ ಧಾರ್ಮಿಕ ನಾಗರಿಕತೆಯ ಪರಿಕರಗಳೇ ಆಗಿವೆ. ಹಾಗಾಗಿ ಅವುಗಳಲ್ಲಿ ಉಂಟಾದ ವಿಪ್ಲವಗಳು ಅರಸನಿಗೆ ಚಿಂತೆಗೀಡು ಮಾಡಿತು. ಹಾಗೆಯೇ ಈ ಪವಾಡದ ಸಂದರ್ಭದಲ್ಲಿ ಅರಸನು ಒಂದು ಬಗೆಯ ವಿಚಿತ್ರ ಪರಿಸ್ಥಿತಿಗೂ ಸಿಲುಕಿಕೊಳ್ಳುತ್ತಾನೆ. ಆದರೆ ವಸ್ತುಸ್ಥಿತಿ ಬೇರೆಯೇ ಇದೆ. ಅಸ್ಪೃಶ್ಯತೆ ಹಾಗೂ ಜಾತಿ ನಿರ್ಮೂಲನೆಯಂಥ ವಿಷಯದಲ್ಲಿ ಪುರೋಹಿತ ಶಾಹಿಯ ಶಕ್ತಿ ಸಾಮಾನ್ಯವಾಗಿ ಇಂಥ ವಿಚಿತ್ರವಾದ ಪರಿಸ್ಥಿತಿ ನಿರ್ಮಾಣಕ್ಕೆ ಕಾರಣವಾಗಿರುವ ಸಂಗತಿಗಳು ಚರಿತ್ರೆ ಉದ್ದಕ್ಕೂ ಗೋಚರಿಸುತ್ತವೆ. ಭೋಗಣ್ಣನನ್ನು ಕೆಂಬಾವಿ ಪುರದಿಂದ ಬಹಿಷ್ಕರಿಸಲು ಹಾಗೂ ಆತನನ್ನು ಮರಳಿ ಪುರಕ್ಕೆ ಕರೆತರುವಂತೆ ಅರಸನಿಗೆ ಒತ್ತಾಯ ಮಾಡಿದ್ದು ಪುರೋಹಿತ ವ್ಯವಸ್ಥೆಯೇ ಆಗಿದ್ದರೂ; ಅರಸನಾದವನು ಇವನ್ನು ನಿಭಾಯಿಸಲು ಹೇಗೆ ಪರಿತಪಿಸುತ್ತಾನೆ? ಎಂಬ ಸಂಗತಿಯನ್ನು ಸೂಕ್ಷ್ಮವಾಗಿ ಗಮನಿಸಬೇಕಾಗುತ್ತದೆ.

ಭೋಗಣ್ಣ ಕೆಂಬಾವಿ ಪುರವನ್ನು ತೊರೆಯುತ್ತಲೇ ಅಲ್ಲಿದ್ದ ಸ್ಥಾವರಲಿಂಗಗಳು ಜಂಗಮ ರೂಪು ತೊಟ್ಟು ಶರಣ ಭೋಗಣ್ಣನಿದ್ದೆಡೆ ನಡೆದು ಹೋಗುತ್ತವೆ. ಪುರೋಹಿತರು ಮರುದಿನ ದೇವಾಲಯಕ್ಕೆ ಬಂದು ದೇವರಿಲ್ಲದ ಗುಡಿಯನ್ನು ಕಂಡು ಅಶ್ಚರ್ಯಚಕಿತರಾಗಿ ಅರಸನಲ್ಲಿ ಮೊರೆ ಇಡುತ್ತಾರೆ. ಈ ವಿಚಾರದಲ್ಲಿ ಎಚ್ಚೆತ್ತುಕೊಂಡ ರಾಜ ಚಂದಿಮರಸನು ಪರಿವಾರ ಸಮೇತನಾಗಿ ಭೋಗಣ್ಣನಿದ್ದಲ್ಲಿ ಬರುವನು. ಭೋಗಣ್ಣನನ್ನು ಪುರಕ್ಕೆ ಮರಳಿ ಬರುವಂತೆ ಬೇಡಿಕೊಳ್ಳುವನು. ಆ ದೃಶ್ಯವನ್ನು ಹರಿಹರ ಅದ್ಭುತವಾಗಿ ಚಿತ್ರಿಸಿದ್ದಾನೆ.

**“ಶಿವನನರಿಯದದ ಪಾತಕರ್ಗೆ ಕರುಣಿಪುದಯ್ಯ**
**ಭವನನರಿಯದ ಭಾಗ್ಯಹೀನರಿಗೆ ದಮ್ಮಯ್ಯ**
**ಕರುಣಿಸುವುದೆಮಗೆ ಕಾರುಣ್ಯನಿಧಿ ಭೋಗಣ್ಣ**
**ಮುಂದರಿಯದಜ್ಞರಿಗೆ ಬುದ್ಧಿಗೊಡು ಭೋಗಣ್ಣ”**
**(ಹರಿಹರನ ರಗಳೆಗಳು, ಪುಟ:275)**

ಎಂದು ಪ್ರಾರ್ಥಿಸಿ, ಭೋಗಣ್ಣನನ್ನು ಸಮಾಧಾನ ಮಾಡಡುವರು. ಇದರಿಂದ ಸಂತುಷ್ಟನಾದ ಭೋಗಣ್ಣ ಕೆಂಬಾವಿಗೆ ಹಿಂತಿರುಗಿ ಬರುವನು. ಕಾಲದ ವಿಪರ್ಯಾಸವೆಂಬಂತೆ ಯಾವ ವರ್ಗದ ಜನರು ಭೋಗಣ್ಣನನ್ನು ಪುರದಿಂದ ಬಹಿಷ್ಕಾರಕ್ಕೆ ಗುರಿಯಾಗಿಸಿತ್ತೊ! ಅದೇ ವರ್ಗದ ಜನರು ಹಿಂದಿರುಗಿ ಕೆಂಬಾವಿಗೆ ಮರಳುವಂತೆ ಮಾಡಿತು. ಅರಸ ಮತ್ತು ಆತನ ಪರಿವಾರವು ಭೋಗಣ್ಣನನ್ನು ಸಕಲ ಗೌರವದಿಂದ, ವಾದ್ಯ-ಮೇಳ ವೃಂದಗಳೊಂದಿಗೆ ಸಂಭ್ರಮದಿಂದ ಕೆಂಬಾವಿಗೆ ಕರೆತಂದರು. “ದೇವರಂ ದೇವಿಯರನೊಂದು ಮಾಡುವೆನೆನುತೆ, ದೇವಿಯರ ನಿಂತಗಲ್ದಿರಲಾರದೆಂದೆನುತೆ, ತಿರುಗಿದಂ ಶಿವಲಿಂಗಸಹಿತವಾ ಭೋಗಣ್ಣ”. (ಹರಿಹರನ ರಗಳೆಗಳು, ಪುಟ:275) ಹೀಗೆ ಭೋಗಣ್ಣನ ಹಿಂದೆಯೇ ಎಲ್ಲಾ ಲಿಂಗಗಳು ಪುರಕ್ಕೆ ತುಂಬು ಸಂಭ್ರಮದಿಂದ ಬಂದವು.

ಲಿಂಗಗಳು ಪುರಕ್ಕೆ ಬರುವ ಸಂದರ್ಭವನ್ನು ಹರಿಹರ “ಎನಗೆ ತನಗೆಂಬಂತೆ ಮುಂಚಿದವು ಶಿವಲಿಂಗ, ಅನುರಾಗದಿಂದೆ ಸಂಭ್ರಮಿಸಿದವು ಶಿವಲಿಂಗ” (ಹರಿಹರನ ರಗಳೆಗಳು, ಪುಟ:276) ಎಂದು ಸೊಗಸಾಗಿ ವರ್ಣಿಸಿದ್ದಾನೆ. ತಮ್ಮ “ನಿಜಸ್ಥಾನಂಗಳಂ ಮರೆದು ಪರಮ ಸುಖವೇರುತುರವಣಿಸುತಂ” (ಹರಿಹರನ ರಗಳೆಗಳು, ಪುಟ:276) ಎಂದು ಲಿಂಗಗಳು ಸ್ಥಾನಪಲ್ಲಟವಾದವು. ಭಕ್ತನಾದ ಭೋಗಣ್ಣನು ಪುರಕ್ಕೆ ಬಂದ ಸಂತಸದಲ್ಲಿ ಲಿಂಗಗಳು “ಪಿರಿಯ ಪೀಠಂಗಳೊಳ್ಕಿರಿಯ ಲಿಂಗಂಗಳಿರೆ, ನೆರೆದು ಕಿರಿಯವರಲ್ಲಿ ಪಿರಿಯ ಲಿಂಗಂಗಳಿರೆ” (ಹರಿಹರನ ರಗಳೆಗಳು, ಪುಟ:276) ಎಂದು ಮೈಮರೆತು ಉಲ್ಲಾಸದಲ್ಲಿ ಮಿಂದೆದ್ದವು ಎಂದು ಹರಿಹರ ಅದ್ಭುತವಾಗಿ ವರ್ಣಿಸಿದ್ದಾನೆ.

ಭೋಗಣ್ಣನಿಗೆ ಕೆಂಬಾವಿ ಪುರದ ಸೆಳೆತವು ಎಷ್ಟಿತ್ತು ಎಂಬುದನ್ನು ಅಲ್ಲಿದ್ದ ಶಿವಲಿಂಗಗಳಲ್ಲಿ ಉಂಟಾದ ಮಾರ್ಪಾಡುಗಳ ಮೂಲಕ ಕವಿ ಅದ್ಭುತವಾಗಿ ಚಿತ್ರಿಸಿದ್ದಾನೆ. ಶರಣ ಸಂಕುಲದ ಕೇಳಿಕೆಯ ವಾದ್ಯಗಳು ಮೊಳಗುತ್ತಿರಲು; ಶರಣ ಭೋಗಣ್ಣನ ಮನಸ್ಸಿಗೆ ಆದ ಮುನಿಸು ಹಿಂದಕ್ಕೆ

ಸರಿಯಿತು. ಇದರಿಂದ ಕೆಂಬಾವಿ ಪುರದೊಳಗೆ "ಶಿವಶಕ್ತಿ ವೈವಾಹವಾದುದಾ ಪುರದೊಳಗೆ; ಶಿವಭಕ್ತಿಸಂಪದಂ ಬೆಳೆದುದ ಪುರದೊಳಗೆ" (ಹರಿಹರನ ರಗಳೆಗಳು, ಪುಟ:276) ಎಂದು ಕವಿ ವರ್ಣಿಸುವನು. ಆ ಮುಖೇನ ಕೆಂಬಾವಿ ಪುರದಲ್ಲಿ ಸಂತೃಪ್ತ ಭಾವವನ್ನು ತುಂಬುವನು. ಆಗ ನಭೋಮಂಡಲದಿಂದ ದೇವಾನುದೇವತೆಗಳು ಪುಷ್ಪ ಸಮರ್ಪಣೆ ಮಾಡಿ ಭೂಲೋಕದಲ್ಲಿದ್ದ ಶರಣ ಭೋಗಣ್ಣನನ್ನು ಹರಸಿದವು. ಅಂದು ಭೋಗಣ್ಣನ ಶಿವಭಕ್ತಿಯನ್ನು ನಂಬಲನರ್ಹವಾಗಿದ್ದ ಮೇಲ್ವರ್ಗದ ಶಿಕ್ಷಿತ ವರ್ಗದವರು ನೋಡುನೋಡುತ್ತಿದ್ದಂತೆ ವಿಸ್ಮಯಗೊಂಡರು. ಈ ದೃಶ್ಯವನ್ನು ರಾಜ ಚಂದಿಮರಸನು ಕೌತುಕದಿಂದ ನೋಡಿದನು. ನೆರೆದಿದ್ದ ಭಕ್ತರೆಲ್ಲರೂ ಕೈಮುಗಿದು ನಮಿಸಿದರು. ಭೋಗಣ್ಣನ ನಿಷ್ಠೆಯನ್ನು ಕೈಲಾಸದಿಂದ ಶಿವಪಾರ್ವತಿಯರು ಪುಷ್ಪಾರ್ಚನೆಗೈದು ಹರಸಿದರು.

ಹೀಗೆ ಶರಣ ಭೋಗಣ್ಣನು ಗುರು ಲಿಂಗ ಜಂಗಮ ಸೇವೆಯಲ್ಲಿ ನಿರತನಾಗಿ; ಮೇಲು ಕೀಳುತನಗಳನ್ನು ತೊಡೆದುಹಾಕಿ; ಉಚ್ಚ-ನೀಚವೆಂಬ ಕಲ್ಪನೆಯನ್ನು ತಡೆಗಟ್ಟಿ; ಮಾನವ ಕುಲಕೋಟಿ ಒಂದೆಂದು ತಿಳಿದು ಸಕಲರನ್ನು ಪ್ರೀತಿಸುತ್ತಿದ್ದನು. ಅವರನ್ನು ಹತ್ತಿರ ಕರೆದು ಕುಳ್ಳಿರಿಸಿಕೊಳ್ಳುತ್ತಿದ್ದನು. ಅಸ್ಪೃಶ್ಯತೆ ಎಂಬ ಮಾತು ಅವರ ದೃಷ್ಟಿಯಲ್ಲಿ ಬಹುದೂರ. ಮುಟ್ಟಿ-ತಟ್ಟಿ ಎಂಬ ಸಾಂಕ್ರಾಮಿಕ ರೋಗಕ್ಕೆ ಯಾರೂ ಬಲಿಯಾಗಬಾರದೆಂದು ಕಳಕಳಿಯಿಂದ ಹೇಳುತ್ತಿದ್ದನು. ನಡೆನುಡಿಗಳೊಂದಾಗಿ ಶರಣ ಭೋಗಣ್ಣನು ಭುವಿಯ ಮೇಲಿನ ಭಗವಂತನಂತೆ ಪ್ರಕಾಶಮಾನವಾಗಿ ಪ್ರಜ್ವಲಿಸುತ್ತಿದ್ದನು. ಪ್ರತಿಯೊಬ್ಬ ಮನುಷ್ಯನನ್ನು ಶಿವಸ್ವರೂಪಿಯೆಂದು, ಜಂಗಮರೆಂದು ಭಾವಿಸುತ್ತಿದ್ದನು. ಅದರಂತೆ ನಡೆಯುತ್ತಿದ್ದನು. ಇದು ಶರಣರು ತಳೆದ ನಿಲುವು. ಹಾಗೇಯೆ ಶರಣರ ಅಂತರಂಗದ ಚೆಲುವು ಆಗಿದೆ.

## ಪರಾಮರ್ಶನ ಗ್ರಂಥಗಳು:


1. ಕಲಬುರ್ಗಿ ಎಂ. ಎಂ. (ಸಂ). (2011). ಹರಿಹರನ ರಗಳೆಗಳು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ. ಬೆಂಗಳೂರು.
2. ವಿಜಯಕುಮಾರ ಎಸ್. ಕಟಗಿಹಳ್ಳಿಮಠ. (2008). ಬಸವೋತ್ತರ ಯುಗದ ವಚನ ಸಾಹಿತ್ಯ. ಕನ್ನಡ ಸಾಹಿತ್ಯ ಪರಿಷತ್ತು. ಬೆಂಗಳೂರು.
3. ಕಾಶೀಬಾಯಿ ಎಸ್. ಭೋಗಶೆಟ್ಟಿ. (2012). ಕೆಂಬಾವಿ ಭೋಗಣ್ಣ. ವೈಷ್ಣವಿ ಪ್ರಕಾಶನ. ಕಲಬುರ್ಗಿ.
4. ಕಲಬುರ್ಗಿ ಎಂ. ಎಂ. (1999). ಹರಿಹರನ ರಗಳೆಗಳು. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ.
5. ವಿದ್ಯಾಶಂಕರ ಎಸ್. (ಸಂ). (2001). ಸಂಕೀರ್ಣ ವಚನಸಂಪು-2. ಕನ್ನಡ ಪುಸ್ತಕ ಪ್ರಾಧಿಕಾರ. ಬೆಂಗಳೂರು.
6. ಕಲಬುರ್ಗಿ ಎಂ. ಎಂ. (ಸಂ). (2001). ಬಸವಣ್ಣನವರ ವಚನಸಂಪುಟ. ಕನ್ನಡ ಪುಸ್ತಕ ಪ್ರಾಧಿಕಾರ. ಬೆಂಗಳೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.